# ಶ್ರೀಪತಿಯು ನಮಗೆ ಸಂಪದವೀಯಲಿ

1. Ref.: Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 03.
2. **Ref.:** This is from the book: Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 51.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 538.
4. **Note:** The wordings mainly are as per book in Ref. 1 above. The wordings in book in Ref. 2 above and that of the singer are matching and the differences with Ref.1 are marked in yellow highlights.

ರಾಗ: ನಟ್ಟ ತಾಳ: ಛಾಪು

ಶ್ರೀಪತಿಯು ನಮಗೆ ಸಂಪದವೀಯಲಿ
ವಾಣೀ ಪತಿಯು ನಮಗೆ ದೀರ್ಘಾಯು ಕೊಡಲಿ || ಪ ||

ಸುರರ ಗಣವನು ಪೊರೆಯೆ ವಿಷವ ಕಂಠದಲಿಟ್ಟ
(ಹರ ನಿತ್ಯ ನಮಗೆ ಸಹಾಯಕನಾಗಲಿ) (ಹರ ನಮಗೆ ಸತತ ಸಹಾಯಕನಾಗಲಿ)
ನರರೊಳುನ್ನತವಾದ (ನಿತ್ಯ ಭೋಗಂಗಳನು) (ಭೋಗ ಭಾಗ್ಯಂಗಳನು)
ಪುರುಹೂತ ಪೂರ್ಣ ಮಾಡಿಸಲಿ ನಮಗೆ || 1 ||

ವಿನುತ ಸಿದ್ಧಿಪ್ರದನು ವಿಘ್ನೇಶ ದಯದಿಂದ
ನೆನೆದ ಕಾರ್ಯಗಳೆಲ್ಲ ನೆರವೇರಿಸಲಿ
ದಿನ ದಿನದಿ ಅಶ್ವಿನಿಗಳಾಪತ್ತುಗಳ ಕಳೆದು
ಮನಕೆ ಹರುಷವನಿತ್ತು ಮನ್ನಿಸಲಿ ಬಿಡದೆ || 2 ||

ನಿರುತ ಸುಜ್ಞಾನವನು ಈವ ಮಧ್ವರಾಯ
ಗುರುಗಳಾಶೀರ್ವಾದ ನಮಗಾಗಲಿ

ಪುರಂದರ ವಿಠಲನ ಕರುಣದಿಂದಲಿ ಸಕಲ
ಸುರರೊಲುಮೆ ನಮಗೆ ಸುಸ್ಥಿರವಾಗಲಿ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದು ತಾರತಮ್ಯಸ್ತೋತ್ರವೆಂದು ಹೆಸರಾಗಿದೆ. ಇದರಲ್ಲಿ ಮಾಧ್ವಸಿದ್ಧಾಂತದ ದೇವತಾ ತಾರತಮ್ಯದ ಅವರೋಹಣ ಕ್ರಮವನ್ನು ಅನುಸರಿಸಿ ಮೊದಲು ಲಕ್ಷ್ಮೀ ನಾರಾಯಣರು (ಮೊದಲ ಎರಡು ಕಕ್ಷೆಗಳು), ಬ್ರಹ್ಮ ಸರಸ್ವತಿಯರು (ಮೂರು ನಾಲ್ಕನೆಯ ಕಕ್ಷೆಗಳು), ರುದ್ರ (ಐದನೆಯ ಕಕ್ಷೆ), ಇಂದ್ರ (ಎಂಟನೆಯ ಕಕ್ಷೆ), ಗಣಪತಿ ಮತ್ತು ಅಶ್ವಿನೀ ದೇವತೆಗಳು (ಹದಿನೆಂಟನೆಯ ಕಕ್ಷೆ) ಕಡೆಯಲ್ಲಿ ಗುರುಗಳು ಇವರ ಪ್ರಾರ್ಥನೆಯಿದೆ. ಆರು ಮತ್ತು ಏಳನೆಯ ಕಕ್ಷೆಗಳಲ್ಲಿರುವ ಕೃಷ್ಣನ ಷಣ್ಮಹಿಷಿಯರು ಮತ್ತು ಸೌಪರ್ಣೀ, ವಾರುಣೀ ಪಾರ್ವತಿಯರನ್ನೂ, ಒಂಬತ್ತರಿಂದ ಹದಿನೇಳನೆಯ ಕಕ್ಷೆಗಳಲ್ಲಿರುವ ಅಹಂಕಾರಿಕಪ್ರಾಣ, ದಕ್ಷಾದಿಗಳು, ಪ್ರವಹವಾಯು, ಸೂರ್ಯ ಚಂದ್ರಾದಿಗಳು, ವರುಣ ನಾರದ ಮತ್ತಿತರ ಋಷಿಗಳು ಮೊದಲಾದ ದೇವತೆಗಳನ್ನೆಲ್ಲ ಬಿಟ್ಟಿದ್ದಾರೆ. ಇವರೆಲ್ಲ ಅಮುಖ್ಯ ತತ್ತ್ವೇಶರೆಂಬ ಕಾರಣದಿಂದ ಇರಬಹುದು. ಮುಖ್ಯ ದೇವತೆಗಳಲ್ಲೂ ಎರಡನೆಯ ಕಕ್ಷೆಯಲ್ಲಿ ವಾಯುವನ್ನೂ ನಾಲ್ಕನೆಯ ಕಕ್ಷೆಯಲ್ಲಿ ಭಾರತಿಯನ್ನೂ ಏಳನೆಯ ಕಕ್ಷೆಯಲ್ಲಿ ಪಾರ್ವತಿಯನ್ನೂ ಬಿಟ್ಟಿರುವುದನ್ನು ಗಮನಿಸಬಹುದು. ವಾಯುವಿನ ಅವತಾರವಾದ ಮಧ್ವಾಚಾರ್ಯರು ಗುರುಗಳ ಕಕ್ಷೆಯಲ್ಲಿ ಬಂದಿದ್ದಾರೆ.

ಶ್ರೀ ಮಧ್ವಾಚಾರ್ಯರು ಪರಮಾತ್ಮನಿಂದ ಮೊದಲು ಮಾಡಿ ಮನುಷ್ಯೋತ್ತಮರ ವರೆಗೆ ಅವರವರ ಗುಣ ತಾರತಮ್ಯಾನುಸಾರವಾಗಿ ಸ್ಥಾನ ಭೇದಗಳನ್ನು ಪ್ರಾಚೀನ ಪ್ರಮಾಣಗಳಿಂದ ವಿವರಿಸಿರುವರು. ಇವುಗಳಿಗೆ "ಕಕ್ಷ" ಎಂದು ಪರಿಭಾಷಾ ನಾಮವಿದೆ. ಒಟ್ಟು ೩೨ ಕಕ್ಷಗಳು.

**ಶ್ರೀಪತಿ** – ನಾರಾಯಣನು (ಮೊದಲ ಕಕ್ಷೆ), ಲಕ್ಷ್ಮಿ (ಎರಡನೆಯ ಕಕ್ಷೆ) ಯೊಡಗೂಡಿ.

**ವಾಣೀಪತಿಯು** – ಬ್ರಹ್ಮನು (ಮೂರನೆಯ ಕಕ್ಷೆ), ಸರಸ್ವತಿ (ನಾಲ್ಕನೆಯ ಕಕ್ಷೆ) ಯೊಡಗೂಡಿ.

**ಸುರರ ಗಣವನು ಪೊರೆಯೆ** – ಸಮುದ್ರ ಮಥನ ಕಾಲದಲ್ಲಿ ವಿಷವು ಹೊರಬಂದು ದೇವತೆಗಳನ್ನು ತೊಂದರೆಗೀಡು ಮಾಡಿದಾಗ, ರುದ್ರನು ಈ ವಿಷವನ್ನುಂಡು ದೇವತೆಗಳ ನೆಮ್ಮದಿಗೆ ಕಾರಣನಾದನೆಂಬ ಕತೆ ಹಿನ್ನೆಲೆ. ಆಗಲೇ ಶಿವನು ವಿಷಕಂಠನಾದದ್ದು.

**ಹರ** – ಶಿವ, ರುದ್ರ ದೇವರು.

**ನಿತ್ಯ ಭೋಗ** = ಸಕಾಮ ಕರ್ಮಗಳ ಸತ್ಫಲ

**ಸುಜ್ಞಾನ** = ಮೋಕ್ಷ ಜ್ಞಾನ

**ಮಧ್ವರಾಯ** = ದ್ವೈತ ಮತ ಸ್ಥಾಪಕರಾದ ಶ್ರೀ ಮಧ್ವಾಚಾರ್ಯರು. ಇವರಿಗೆ ಸುಖತೀರ್ಥ, ಆನಂದತೀರ್ಥ, ಪೂರ್ಣತೀರ್ಥ, ಅಲವಬೋಧ, ಸರ್ವಜ್ಞ, ದಶ ಪ್ರಮತಿ, ಮುಂತಾದ ಹೆಸರುಗಳಿವೆ

**ಪುರುಹೂತ** – ಇಂದ್ರ. (ಕಕ್ಷ ೮)

**ವಿಘ್ನೇಶ** – ಗಣಪತಿ (ಕಕ್ಷ ೧೮)

**ಅಶ್ವಿನಿಗಳು** – ಸೂರ್ಯನ ಅವಳಿ ಮಕ್ಕಳು. ಅಶ್ವಿನೀ ಕುಮಾರರು; ದೇವಲೋಕದ ವೈದ್ಯರು (ಕಕ್ಷ ೧೮)

**ಸಕಲ ಸುರರ** – ತಾರತಮ್ಯ ಮಾಲಿಕೆಯಲ್ಲಿರುವ ಎಲ್ಲ ದೇವತೆಗಳು (ಎರಡನೆಯ ಕಕ್ಷೆಯಿಂದ ಇಪ್ಪತ್ತೇಳನೆಯ ಕಕ್ಷೆಯವರೆಗೆ)

**Classification:** Keerthane
**Ankita:** purandara vittala
**Location:** NA
**Category:** Taratamya, Poojatatva
**Sub-Category:** sripati, brahma, sura, shiva, nara, bhoga, ganesha, daya, ashwini, jnana, ahirwada, karuna, kaksha, madhva,
**Pravachana:** NA
**Explanation:** NA